# ಕ್ರೀಡಾಪಟುಗಳೇ ಈ ದೇಶದ ಸಂಪತ್ತು: ಮುನಿರಾಜು

ಕ್ರೀಡೆ ಸದೃಢತೆ, ಶಿಸ್ತು, ಸಂಯಮ, ಬೆಳೆಸುತ್ತದೆ. ಜೊತೆಗೆ ಕ್ರೀಡಪಟುಗಳೇ ಈ ದೇಶದ ಸಂಪತ್ತು ಎಂದು ಟಿ ದಾಸರಹಳ್ಳಿ ಶಾಖೆ ವಿಜಯ ಬ್ಯಾಂಕ್ ವ್ಯವಸ್ಥಾಪಕ ಮುನಿರಾಜು ಹೇಳಿದರು

ಅವರು ಜಾಲಹಳ್ಳಿ ಸ್ಟೆಂಟ್ ಕ್ಲಾರೆಟ್ ಕಾಲೇಜು ಆಯೋಜಿಸಿದ್ದ ಅಥೇನಿಯಾ ವಾರ್ಷಿಕ ಕ್ರೀಡ ಕೂಟದ ಮುಖ್ಯ ಅತಿಥಿತಿಗಳಾಗಿ ಆಗಮಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ರೆ.ಫಾ.ಡಾ. ಸಾಬುಜಾರ್ಜ ವಹಿಸಿ ಮಾತನಾಡಿ ಪಾಠ ಪ್ರವಚನದ ಜೊತೆಗೆ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಮತ್ತು ಸಾಂಸ್ಕೃತಿಕ ಚಟುವಟಿಕೆಯಲ್ಲಿ ಬಾಗವಹಿಸಲು ಅವಕಾಶವನ್ನು ಮಾಡಿಕೊಟ್ಟಿದ್ದು ನಮ್ಮ ವಿದ್ಯಾರ್ಥಿಗಳು ರಾಜ್ಯ ಮತ್ತರಾಷ್ಟ್ರೀಯ ಮಟ್ಟದಲ್ಲಿ ಪದಕವನ್ನು ಸಹ ಪಡೆದಿರುವರು ಎಂದರು. ಅಂತಿಮವಾಗಿ ವಾರ್ಷಿಕ ವಿಶೇಷ ಕ್ರೀಡಾಪಟುಗಳಾದ ಕೀರ್ತಿಕುಮಾರ್ ಬಿಬಿ ಬಿ.ಕಾಂ ಮತ್ತು ಶೋಭ ಬಿಬಿಬಿ ಬಿ.ಕಾಂ ಇವರಿಗೆ ಪ್ರಾಂಶುಪಾಲರು ಪ್ರಶಸ್ತಿಪತ್ರ ಮತ್ತು ಟ್ರೋಫಿ ವಿತರಿಸಿದರು ಹಾಗೂ ವಿಶೇಷ ವಾರ್ಷಿಕ ಉದೋನ್ಮುಖಿ ಕ್ರೀ ಡಾ ಪಟುಗಳೆಂದು ತೃತೀಯ ವರ್ಷದ ವಿದ್ಯಾರ್ಥಿಗಳಿಗೆ ಓವರ್ ಆಲ್ ಚಾಂಪಿಯನ್ ಶಿಫ್ ಟ್ರೋಫಿ ವಿತರಿಸಿದರು ಕಾರ್ಯಕ್ರಮದಲ್ಲಿ ಮಾನ್ಯೇಜರ್ ಬೆನ್ನಿಮಾಥ್ಯ, ದೈಹಿಕ ನಿರ್ದೇಶಕರಾದ ಮುನಿರಾಜು ಎಂ.ಜಿ, ಶಿನಿಲ್ ಎಂ.ಕೆ, ನೀತಾ, ಮಾದೇಶ್ ಎನ್, ಸುರೇಶ್ ಎನ್, ಸೋಮಂಜಲಿ ಮೊಹಪಾತ್ರ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



# ಒಳಾಂಗಣ ಕ್ರೀಡಾಂಗಣವನ್ನು ಮಾಡಿಕೊಡುವ ಭರವಸೆ

ಜ್ಞಾನಭಾರತಿ ಬಡಾವಣೆ ಕ್ರೀಡಾಸಕ್ತರಿಗಾಗಿ ಒಳಾಂಗಣ ಕ್ರೀಡಾಂಗಣವನ್ನು ಮಾಡಿಕೊಡುವ ಭರವಸೆಯನ್ನು ಶಾಸಕ ಎಸ್.ಟಿ.ಸೋಮಶೇಖರ್ ನೀಡಿದರು.

ಅವರು ಜ್ಞಾನಭಾರತಿ ಬಡಾವಣೆ ಮಲಗೆರಹಳ್ಳಿಯಲ್ಲಿ ಸ್ನೇಹ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ ಆಯೋಜಿಸಿದ್ದ ಬ್ಯಾಡ್‌ಮಿಂಟನ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನವನ್ನು ವಿತರಿಸಿ ಮಾತನಾಡಿ, ಕ್ರೀಡಾ ಚಟುವಟಿಕೆಗಳು ಹೆಚ್ಚಾಗಬೇಕು ಅದಕ್ಕೆ ಬೇಕಾಗುವ ಎಲ್ಲ ರೀತಿಯ ನೆರವನ್ನು ನೀಡಲಾಗುವುದು ಇದರ ಜೊತೆಗೆ ವ್ಯಾಯಾಮವನ್ನು ಮಾಡಲು ಉದ್ಯಾನವನದಲ್ಲಿ ತೆರೆದ ಜಿಮ್‌ನ್ನು ಅಳವಡಿಸಿದ್ದು ಇದರ ಸದುಪಯೋಗವನ್ನು ಪಡೆದು ನಿಮ್ಮ ಆರೋಗ್ಯವನ್ನು ಉತ್ತಮ ಪಡಿಸಿಕೊಳ್ಳಿ ಎಂದರು,

ಕೆಂಗೇರಿ ಪುರಸಭೆಯ ಮಾಜಿಉಪಾಧ್ಯಕ್ಷ ಜಿ.ಮುನಿರಾಜು ಮಾತನಾಡಿ ಈ ಬಾಗದ ಬಡಾವಣೆಯಲ್ಲಿ ಕ್ರೀಡೆಗಾಗಿ ಯಾವುದೆ ಜಾಗವನ್ನು ಬಿಡಿಎ ಬಿಟ್ಟಿಲ್ಲ ಬಲಮುರಿ ದೇವಸ್ಥಾನ ಮುಂಬಾಗದಲ್ಲಿರುವ ಖಾಲಿ ಸಿಎ ನಿವೇಶನವನ್ನು ಕ್ರೀಡಾ ಚಟುವಟಿಕೆಗಾಗಿ ಮೀಸಲಾಗಿಡಲು ಬಿಡಿಎಗೆ ಮನವಿಯನ್ನು ಸಲ್ಲಿಸಿ ಮಂಜೂರು ಮಾಡಿಸಲು ಪ್ರಯತ್ನಿಸುವುದಾಗಿ ಹೇಳಿದರು,

ಸಮಾರಂಭದಲ್ಲಿ ನಾಮನಿರ್ದೇಶಿತ ಪಾಲಿಕೆ ಸದಸ್ಯ ಜೆ.ವಿ.ಸುರೇಶ್,ಸಂಘದ ಗೌರವಾಧ್ಯಕ್ಷ ಶಾಂತರಾಮರೆಡ್ಡಿ,ಹಾಪಕಾಮ್ಸ್ ನಿರ್ದೇಶಕ ಜಯಕುಮಾರ್,ಕನ್ನಡಪೇ ಸತ್ಯ ರಂಗಣ್ಣ,ರಾಮಸಂದ್ರ ಅಶೋಕ್,ಅಧ್ಯಕ್ಷ ಸಂಜೀವರೆಡ್ಡಿ,ಕಾರ್ಯದರ್ಶಿಕೃಷ್ಣಕುಮಾರ್,ಬಲಮುರಿ ದೇವಸ್ಥಾನದ ಗೌರವಾಧ್ಯಕ್ಷ ರಾಮಪ್ಪ ಸೇರಿದಂತೆ ಅನೇಕರು ಹಾಜರಿದ್ದರು,

ಪಂದ್ಯಾವಳಿಯಲ್ಲಿ ಒಟ್ಟು ಮುವತ್ತಾರು ತಂಡಗಳು ಬಾಗವಹಿಸಿದ್ದು ಕಿಶೋರ್ ಮತ್ತು



ಚೇತನ್‌ಕುಮಾರ್ ಜೋಡಿಯು ಚಾಂಪಿಯನ್‌ರಾಗಿ ಟ್ರೋಪಿಯನ್ನು ಪಡೆದರು, ಹಿರಿಯರ ವಿಬಾಗದಲ್ಲಿ ಮುರುಗನ್ ಮತ್ತು ಮುನಿಯಪ್ಪ ಚಾಂಪಿಯನ್‌ರಾಗಿ ಟ್ರೋಪಿಯನ್ನು ಪಡೆದರು,

# ೩ ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ, ಡಾಂಬರಿಕರಣ ಕಾಮಗಾರಿ



ಬೆಂಗಳೂರು: ಹೊರ ವರ್ತುಲ ರಸ್ತೆಯಿಂದ ಉಳ್ಳಾಲು ವಿಧ್ಯಾನಿಕೇತನ ಶಾಲೆವರೆಗೆ ಕೈಗೊಂಡಿರುವ ರೂ. ಮೂರು ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ, ಡಾಂಬರಿಕರಣ ಕಾಮಗಾರಿಗೆ ಶಾಸಕ ಮುನಿರತ್ನ ಅವರು ಚಾಲನೆ ನೀಡಿದರು.ಡಿ.ಗ್ರೂಪ್ ಬಡಾವಣೆಯಲ್ಲಿ ಮುಗಿದಿರುವ ಒಂದು ಕೋಟಿ ವೆಚ್ಚದ ಡಾಂಬರಿಕರಣ ಉದ್ಘಾಟನೆ, ಕೊಟ್ಟಿಗೇಪಾಳ್ಯ ವಾರ್ಡಿನ ಸೊಲ್ಲಾಪುರದಮ್ಮ ಬಡಾವಣೆ, ರಿಂಗ್ ರಸ್ತೆಯಿಂದ ದೊಡ್ಡಬಿದರಕಲ್ಲು ಆಂಜನೇಯ ಸ್ವಾಮಿ ದೇವಸ್ಥಾನದವರೆಗೆ ರೂ.ಹತ್ತು ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ, ಡಾಂಬರಿಕರಣ, ಕೆಳಸೇತುವೆ ಕಾಮಗಾರಿಗೆ ಚಾಲನೆನೀಡಿ ಮಾತನಾಡಿದ ಅವರು ಜ್ಞಾನಭಾರತಿ ಮತ್ತು ಕೊಟ್ಟಿಗೇಪಾಳ್ಯ ವಾರ್ಡಿನ ಸಂಪೂರ್ಣ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಸಾರ್ವಜನಿಕರು ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ನಡೆಯುವ ಸಂದರ್ಭದಲ್ಲಿ ತಾವೇ ಮುದ್ದಾಗಿ ನಿಂತು ಗುಣಮಟ್ಟವನ್ನು ಪರೀಕ್ಷಿಸಿ, ಹಾಳಾಗದಂತೆ ನೋಡಿಕೊಳ್ಳಬೇಕೆಂದು ಮನವಿ ಮಾಡಿದರು.

ಸ್ಥಳೀಯ ಬಿಬಿಎಂಪಿ ಸದಸ್ಯೆ ಜಿ.ಡಿ.ತೇಜಸ್ವಿನಿ ಸೀತಾರಾಮಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ ಮೈಸೂರು ರಸ್ತೆಯಿಂದ ಹೊರವರ್ತುಲ ರಸ್ತೆ, ಮಾಗಡಿ ರಸ್ತೆ ವರೆಗೆ ಜ್ಞಾನಭಾರತಿ ವಾರ್ಡ್ ವಿಸ್ತಾರವಾಗಿದ್ದು ಸಂಪೂರ್ಣ ರೆವಿನ್ಯೂ ಬಡಾವಣೆಗಳಾಗಿದ್ದು ಅಭಿವೃದ್ಧಿಯಿಂದ ವಂಚಿತಗೊಂಡಿವೆ. ಅನೇಕ ಸಮಸ್ಯೆಗಳು ವಾರ್ಡ್‌ನಲ್ಲಿದ್ದು ಸರ್ಕಾರ ಮತ್ತು ಶಾಸಕರು ಹೆಚ್ಚಿನ ಅನುದಾನ ಬಿಡುಗಡೆ ಮಾಡಿಸಬೇಕೆಂದು ಮನವಿ ಮಾಡಿದರು.

ಬಿಬಿಎಂಪಿ ಸದಸ್ಯ ಜಿ.ಮೋಹನ್ ಕುಮಾರ್ ಮಾತನಾಡಿ ಕೊಟ್ಟಿಗೇಪಾಳ್ಯ ಸಂಪೂರ್ಣವಾಗಿ ಹಿಂದುಳಿದಿದ್ದು ಎಲ್ಲಾ ರಸ್ತೆಗಳು, ಚರಂಡಿ ಹಾಳಾಗಿದ್ದವು. ಶಾಸಕರ ಸಹಕಾರದೊಂದಿಗೆ ವಾರ್ಡ್ ವ್ಯಾಪ್ತಿಯಲ್ಲಿ ಅರವತ್ತು ಕೋಟಿ ವೆಚ್ಚದಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದರು.

ಕಾಂಗ್ರೆಸ್ ಮುಖಂಡ ಎಂ.ಮಂಜುನಾಥ್ ಮಾತನಾಡಿ ಜ್ಞಾನಭಾರತಿ ವಾರ್ಡ್ ಇತ್ತ ಹಳ್ಳಿಯೂ ಆಗದೇ ಪಟ್ಟಣವೂ ಆಗದ ಪರಿಸ್ಥಿತಿಯಿದ್ದ ಬಡಾವಣೆಗಳನ್ನು ಶಾಸಕರ ದೂರದೃಷ್ಟಿ,ಚಿಂತನೆ ಹಾಗೂ ಅಭಿವೃದ್ಧಿ ಪರವಾದ ಧೋರಣೆಯಿಂದಾಗಿ ವೇಗವಾಗಿ ಬಡಾವಣೆಗಳು ಅಭಿವೃದ್ಧಿ ಹೊಂದುತ್ತಿದ್ದು, ಜನಾವಣೆಗೂ ಮುನ್ನ ನೀಡಿದ ಭರವಸೆಯನ್ನು ಈಡೇರಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.